# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 164/2015 ಸಿಡಬ್ಲ್ಯೂ: 8 ಪಿಡಬ್ಲ್ಯೂ: 5

ಪ್ರಮಾಣವಚನ ದಿಃ 05-11-2025
ಬೋಧಿಸಲಾಯಿತು

ಹೆಸರು : ದೇವಯ್ಯ

ತಂದೆ ಹೆಸರು : ಭುಗ್ಗಯ್ಯ

ವಯಸ್ಸು : 53 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಖೋಡ್ಲಾ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 1 ನನಗೆ ಗೊತ್ತಿಲ್ಲ. ಆರೋಪಿತರು ಪರಿಚಯ. ಚಾ ಸಾ 1 ಮತ್ತು ಆರೋಪಿತರ ನಡುವೆ ಆಗಿದೆ ಎನ್ನಲಾದ ತಂಟೆಯ ಬಗ್ಗೆ ನನಗೆ ಗೊತ್ತಿಲ್ಲ. ಪೋಲೀಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ವಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿ.14-08-2014 ರಂದು ಮಧ್ಯಾಹ್ನ 01-00 ಗಂಟೆಯ ಸುಮಾರಿಗೆ ಆರೋಪಿತರು 1 ರಿಂದ 3 ರವರು ಹೋಲ ಸರ್ವೆ ನಂ. 643 ರಲ್ಲಿ 12 ಎಕರೆ 25 ಗುಂಟೆ ಚಾ ಸಾ 1 ರವರ ಹೆಸರಿನಲ್ಲಿ ಇದ್ದು. ಆರೋಪಿತರು ಸುಮಾರು 5 ರಿಂದ 6 ವರ್ಷಗಳಿಂದ ಸದರಿ ಜಮೀನಿನಲ್ಲಿ ಉಳಿಮೆ ಮಾಡುತ್ತಿದ್ದರು ಎಂದರೆ ಸರಿ. ಆಗ ಮೇಲೆ ಹೇಳಿರುವ ದಿನಾಂಕ ಮತ್ತು ಸಮಯಕ್ಕೆ ಚಾ ಸಾ 1 ಮತ್ತು 4 ರವರು ಮೇಲೆ ಹೇಳಿರುವ ಹೋಲಕ್ಕೆ ಹೋಗಿ ಕೆಲಸ ಮಾಡುತ್ತಿದ್ದಾಗ ಆರೋಪಿತರು ಬಂದು ಕಳೆ ನಾಶಕ ಔಷಧಿ ಸಿಂಪಡಿಸುತ್ತಿದ್ದರು ಆಗ ಚಾ ಸಾ 1 ರವರು ಎಣ್ಣೆ ಯಾಕೆಹೊಡೆಯುತ್ತಿದ್ದೀರಾ ಅಂತಾ ಕೇಳಿದಕ್ಕೆ ಆರೋಪಿತರು ರಂಡಿ ನಾವು ನಿನ್ನ ಹೊಲ ಬೆಳೆಯಲು ಬಿಡುವುದಿಲ್ಲ. ಏನು ಮಾಡುತ್ತೀಯ ಮಾಡಿಕೋ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸುಟ್ಟು ಸಾಯುಸುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ಆಗ ನಾನು ಮತ್ತು ಚಾ ಸಾ 6 ಮತ್ತು 7 ರವರು ಜಗಳ ಬಿಡಿಸಿರುತ್ತೇನೆ ಎಂದರೆ ಸರಿಯಿಲ್ಲ. ಜಗಳ ನೋಡಿ ಬಿಟ್ಟಿದ್ದರು ಸಹ ಆರೋಪಿಗೆ ಸಹಾಯ ಮಾಡು ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಗೆ ಒಂದು ಹೇಳಿಕೆಯ ಭಾಗವನ್ನು ಓದಿ ಹೇಳಲಾಯಿತು ಸಾಕ್ಷಿಯು ಅದನ್ನು ನಿರಾಕರಿಸಿರುವುದರಿಂದ ಅದನ್ನು ನಿ ಪಿ 3 ಎಂದು ಗುರುತಿಸಲಾಂತು.

**ಪಾಟೀಸವಾಲುಃ** ಆರೋಪಿ ಪರ  ವಕೀಲರಿಂದ:  ಪಾಟಿ ಸವಾಲು ಇಲ್ಲ ಎಂದು ತಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**